ಪ್ರಮುಖ ಚಿಂತಕ ಜಿ. ರಾಜಶೇಖರ್ ಈ ಕನ್ನಡದ ಮನಸ್ಸು ಬೆಂಗಾಡಾಗಿ ಬದಲುತ್ತಿರುವುದರ ಬಗ್ಗೆ ಅತೀವ ಖೇದ ವ್ಯಕ್ತಪಡಿಸುತ್ತಾರೆ. ನಾವು ಮತ್ತು 'ಅನ್ಯರು' ಎಂದು ಗುರುತಿಸಲು ಬಳಸಲ್ಪಡುತ್ತಿರುವ ಧರ್ಮ, ಜಾತಿ, ರಾಜ್ಯ, ಭಾಷೆ ಮತ್ತು ಮನೋಧರ್ಮವನ್ನೇ ಅವರು ಪ್ರಶ್ನಿಸುತ್ತಾರೆ. (ಜಿ ರಾಜಶೇಖರ್: ಲೇಖಕನಾಗಿ ನನ್ನ ತಲ್ಲಣಗಳು: ಸಂ: ಶೂದ್ರ ಶ್ರೀನಿವಾಸ್). ನಮ್ಮ ಗಡಿನಾಡು ಪ್ರದೇಶದಲ್ಲಿ ಕನ್ನಡ ಶಾಲೆಗಳನ್ನು ಉಳಿಸಿಕೊಳ್ಳುವುದು ಸಮಸ್ಯೆಯಾಗಿದೆ. ಹೊರರಾಜ್ಯಗಳಲ್ಲಿರುವ ಕನ್ನಡಿಗರಿಗೆ ಕನ್ನಡವನ್ನು ಒಂದು ಭಾಷೆಯಾಗಿ ಕಲಿಯುವುದಕ್ಕೆ ಇರುವ ಅವಕಾಶಗಳನ್ನು ಆಗಾಗ ಮೊಟಕುಗೊಳಿಸಲಾಗುತ್ತಿದೆ. ನಮ್ಮ ರಾಜ್ಯದೊಳಗೇ ಸರಕಾರೀ ಶಾಲೆಗಳು, ಎಲ್ಲಿ ಕನ್ನಡ ಮಾಧ್ಯಮವೇ ಇವತ್ತಿಗೂ ಉಳಿದಿದೆಯೊ, ಅವು ಒಂದೊಂದಾಗಿ ಮುಚ್ಚಲ್ಪಡುತ್ತಿವೆ. ನಮ್ಮ ರಾಜ್ಯದ ಪ್ರತಿಭಾನ್ವಿತರು ವಿದೇಶಿ ನೌಕರಿಯತ್ತ ಹೆಚ್ಚು ಆಕರ್ಷಿತರಾಗಿದ್ದಾರೆ. ಅಂಥವರು ಹೆಚ್ಚು ಹೆಚ್ಚಾಗಿ ಅಲ್ಲಿಯೇ ನೆಲೆಯಾಗುತ್ತಾರೆ. ನಮ್ಮ ರಾಜ್ಯದಲ್ಲಿ ಹೊರರಾಜ್ಯದ ಮಂದಿ ಹೆಚ್ಚುತ್ತಿದ್ದಾರೆ. ಇವರು ಕನ್ನಡ ಕಲಿಯುವ ಅನಿವಾರ್ಯ ಇಲ್ಲದಿರುವುದರಿಂದ ಕನ್ನಡದ ಮಂದಿಗಿಂತ ಇವರೇ ಹೆಚ್ಚುತ್ತಿದ್ದಾರೆ. ಕನ್ನಡ ಅಳಿಯುತ್ತಿರುವ ಭಾಷೆ ಎನ್ನುವ ಆತಂಕ ಬೇರೆ ಇದೆ. ಇದಕ್ಕೆ ಇಲ್ಲಿ ಹೇಳಿರುವ 'ಪರಭಾಷಾ ಆಕ್ರಮಣ'ದ ಕಾರಣಗಳಲ್ಲದೆ ನಮ್ಮಲ್ಲಿ ಕನ್ನಡದ ಬಳಕೆ ಕಡಿಮೆಯಾಗುತ್ತಾ ಹೋಗುತ್ತಿರುವುದು ಮತ್ತು ಸ್ವತಃ ನಾವು ಬಳಸುತ್ತಿರುವ ಕನ್ನಡ ಕೂಡ ಶುದ್ಧವಾಗಿಲ್ಲದೇ ಇರುವುದು ಸಹ ಕಾರಣ ಎಂದು ಕೆ.ವಿ. ನಾರಾಯಣ ಅವರು ಗುರುತಿಸುತ್ತಾರೆ. ಉಳಿದವರ ಮಾತಂತಿರಲಿ, ನಮ್ಮ ಅನೇಕ ಉದಯೋನ್ಮುಖ ಸಾಹಿತಿಗಳ ಬರವಣಿಗೆಯೇ ತಪ್ಪುಗಳ ತಿಪ್ಪೆಯಂತಿರುತ್ತದೆ ಎನ್ನುವುದು ಈಚೆಗೆ ನನ್ನ ಗಮನಕ್ಕೆ ಬಂದು ಸಂಪಾದಕರೊಬ್ಬರ ಬಳಿ ಇಂಥವರ ಬರಹವನ್ನೂ ಪ್ರಕಟಿಸುತ್ತೀರಲ್ಲ, ನೀವು ತಪ್ಪಾಗಿ ಬರೆಯುವವರಿಗೆ ಪ್ರೋತ್ಸಾಹ ನೀಡಿದಂತಾಗದೆ, ಸಾಹಿತಿ ಎನಿಸಿಕೊಳ್ಳಲು ಬಯಸುವವರೇ ತಪ್ಪು ತಪ್ಪು ಕನ್ನಡ ಬರೆಯುವುದಾದರೆ ಕನ್ನಡ ಉಳಿಸಿ ಎಂದು ಇನ್ಯಾರಲ್ಲಿ ಮೊರೆಯಿಡುತ್ತೀರಿ ಎಂದು ಕೇಳಿದೆ. ನಮಗೆ ಬರುವ ಲೇಖನಗಳಲ್ಲಿ ನೂರಕ್ಕೆ ತೊಂಬತ್ತೈದರಷ್ಟು ಹೀಗೇ ಇರುತ್ತವೆ, ಅದರಲ್ಲಿ ಹೊಸಬರು ಹಳಬರು ಅಂತೇನಿಲ್ಲ, ತುಂಬ ತಪ್ಪುಗಳಿವೆಯಲ್ಲ ಸರ್ ಎಂದರೆ ನೀವೇ ಸ್ವಲ್ಪ ಸರಿಮಾಡ್ಕೊಳ್ಳಿ ಎನ್ನುವವರೇ ಎಲ್ಲರೂ. ಏನು ಮಾಡ್ತೀರಿ ಎಂದು ನನ್ನನ್ನೇ ಕೇಳಿದರು.

ಈಚೆಗೆ ಓರಿಯೆಂಟ್ ಬ್ಲ್ಯಾಕ್‌ಸ್ವಾನ್ ಸಂಸ್ಥೆಯು ಒಂದು ಪುಸ್ತಕ ಪ್ರಕಟಿಸಿತು. ಅದರ ಹೆಸರು **Impure Languages**. ಭಾಷೆಯ ಬದಲಾವಣೆಯ ಪ್ರಕ್ರಿಯೆಯ ಕುರಿತಾಗಿ ಒಟ್ಟು ಹದಿನಾಲ್ಕು ಮಂದಿ ವಿದ್ವಾಂಸರು, ಚಿಂತಕರು ಸೇರಿ ಬರೆದ ಪ್ರಬಂಧಗಳಿರುವ ಈ ಕೃತಿಯನ್ನು ಸಂಪಾದಿಸಿದವರು ದೆಹಲಿ ವಿಶ್ವವಿದ್ಯಾಲಯದ ಭಾಷಾವಿಜ್ಞಾನ ವಿಭಾಗದ ನಿವೃತ್ತ ಪ್ರೊಫೆಸರ್ ರಮಾಕಾಂತ್ ಅಗ್ನಿಹೋತ್ರಿ, ಯೂನಿವರ್ಸಿಟಿ ಆಫ್ ಹ್ಯಾಂಬರ್ಗ್‌ನ ಪ್ರೊಫೆಸರ್ ಕ್ಲಾಡಿಯಾ ಬೆನಥೀನ್ (ಬರ್ಲಿನ್) ಮತ್ತು ಪ್ರೊಫೆಸರ್ ತಾತಿಯಾನಾ ಒರಾನ್ಸ್‌ಕಯಾ (ರಷ್ಯಾ). ಈ ಕೃತಿಯಲ್ಲಿ ಹಿಂದಿ ಇಂಗ್ಲಿಷ್ ಹೈಬ್ರಿಡಿಟಿ ಕುರಿತೇ ಮೂರು ಪ್ರಬಂಧಗಳಿವೆ. ಇದು ಸರಿಸುಮಾರು ನಮ್ಮ ಸಲ್ಮಾನ್ ರಶ್ದಿ ತನ್ನ ಮಿಡ್ ನೈಟ್ ಚಿಲ್ಡ್ರನ್ ಕಾದಂಬರಿ ಬರೆವ ಹೊತ್ತಿಗೆ ಬಳಸತೊಡಗಿದ 'ಚಟ್ನಿಫಿಕೇಶನ್' ಕುರಿತಾಗಿಯೇ ಇದೆ.

2005ರ ಹೊತ್ತಿಗೇ ಕೆ.ವಿ. ನಾರಾಯಣ ಅವರು ತನ್ನ 'ನಮ್ಮೊಡನೆ ನಮ್ಮ ನುಡಿ' ಎಂಬ ಕೃತಿಯಲ್ಲಿ ಭಾಷೆಯ ಚಟ್ನಿಫಿಕೇಶನ್ ಕುರಿತು ಆಳವಾದ ಅಧ್ಯಯನ ನಡೆಸಿದ್ದರು. 'ನಮ್ಮ ಭಾಷೆ